INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -5, September-October, 2023,
PageNo,30-35
Peer -Reviewed, Refereed Journal

# ದೇವರ ಬೆಳಕೆರೆ ಗ್ರಾಮದ ಚಾರಿತ್ರಿಕ ಹಿನ್ನೆಲೆ

**ಪರಮೇಶ, ಬಿ.**[1]

ದೇವರ ಬೆಳಕೆರೆ ಇದು ಹೋಬಳಿ ಕೇಂದ್ರವಾದ ಮಲೆಬೆನ್ನೂರಿನಿಂದ ಸು. 13 ಕಿ.ಮೀ. ಜಿಲ್ಲಾ ಕೇಂದ್ರವಾದ ದಾವಣಗೆರೆಯಿಂದ ಶಾಮನೂರಿಗೆ ಹೋಗುವ ಮಾರ್ಗವಾಗಿ ಸು.14ಕಿ.ಮೀ. ದೂರದಲ್ಲಿರುವ ಈ ಗ್ರಾಮ ಮಲೆಬೆನ್ನೂರಿನಿಂದ ನಿಟ್ಟೂರು ಮೂಲಕ ಹೋಗುವ ಮಾರ್ಗದಲ್ಲಿ ಕಾಣಬರುತ್ತದೆ. ಇದರ ಪೂರ್ವಕ್ಕೆ ದಾವಣಗೆರೆ ತಾಲೂಕಿಗೆ ಸೇರಿರುವ ಮುದಿಹದಡಿ ಮತ್ತು ಜರೆಕಟ್ಟೆಗಡಿಗಳು, ಪಶ್ಚಿಮಕ್ಕೆ ಕುಣಿಬೆಳಕೆರೆ ಗ್ರಾಮದ ಗಡಿ, ಉತ್ತರಕ್ಕೆ ಕಡ್ಲೆಗುಂದಿಗಡಿ ಮತ್ತು ದಕ್ಷಿಣಕ್ಕೆ ಶೀರನಹಳ್ಳಿಗಡಿ ಹಾಗೂ ಕೆಂಚನಹಳ್ಳಿ ಬೇಚಾರು ಗ್ರಾಮದ ಗಡಿಗಳು ಇವೆ. ಇವುಗಳ ಮಧ್ಯದಲ್ಲಿ ಇರುವ ಗ್ರಾಮವೇ ದೇವರ ಬೆಳಕೆರೆ. ಇದು ಬಾನುವಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಹಾಗೂ ಮಲೆಬೆನ್ನೂರು ಹೋಬಳಿಗೆ ಸೇರಿದೆ.

ಈ ಗ್ರಾಂವು ಮೊದಲು ಈಗಿರುವ ಸ್ಥಳದ ಉತ್ತದ್ಲಲಿ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿ ಹಾಳುವಾಳು (ಹಳ್ಯಾಳು) ಎಂದು ಈಗಲೂ ಕರೆಯಲಾಗುತ್ತಿರುವ ಸ್ಥಳದಲ್ಲಿ ನೆಲೆಸಿದ್ದರು. ಇದಕೆಕ ಬೆಳಗೆರೆ ಕೊಟ್ರಪ್ಪನವರ ತೆಂಗಿನ ತೋಟದಲ್ಲಿರುವ ಈಶ್ವರ ದೇವಾಲಯ, ದೀಟೂರು ಗ್ರಾಮದ ಸಿದ್ದಪ್ಪ ಮಾಸ್ತರ್‌ರವರ ಹೊಲದಲ್ಲಿರುವ ಕಲ್ಲೇಶ್ವರ ದೇವಸ್ಥಾನಗಳು ಸಾಕ್ಷಿಯಾಗಿವೆ. ಮೊದಲು ಈ ಊರನ್ನು ಬೆಳಗೆರೆ ಎಂದು ಕರೆಯಲಾಗುತ್ತಿತ್ತೆಂದು ಇಲ್ಲಿರುವ ಶಾಸನಗಳಿಂದ ಹಾಗೂ ಇಲ್ಲಿರುವ ಬೆಳಗೆರೆ ವಂಶಸ್ಥರ ಮನೆಗಳಿಂದ ಹೇಳಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಒಂದು ದಂತ ಕಥೆಯಿದೆ. ಕಥೆಯ ಪ್ರಕಾರ ಒಂದು ಪರಿವಾರವು ಪೂರ್ವದ ಕಡೆಯಿಂದ ಇಲ್ಲಿಗೆ ಬರುವ ಹೊತ್ತಿಗೆ ಬೆಳಕು ಹರಿದಿದ್ದರಿಂದ ಇಲ್ಲಿಯೇ ನೆಲೆಸಿ "ಬೆಳಕೆರಿ" ಬೆಳಗೆರೆ ಎಂದು ಕರೆದುಕೊಂಡಿದುದಾಗಿ ಹೇಳಲಾಗಿದೆ. ಹರಿಹರದ ಒಂದು ಶಾಸನವು[1] ಚಾಲುಕ್ಯ ಪ್ರತಾಪ ಚಕ್ರವರ್ತಿ ಜಗದೇಕಮಲ್ಲ ವರ್ಷ-5 ಕ್ರಿ.ಶ.1143ರಲ್ಲಿ ಭ್ರಾಂತಿ-30 ಪ್ರಾಂತ್ಯದ ಅಧಿಕಾರ ಹೊಂದಿದ ಐಹರಸನ ಅಳಿಯ ಮಾಚರಸ ಮತ್ತು ಅವನ ತಮ್ಮಂದಿರಾದ ಮಲ್ಲರಸ ಹಾಗೂ

[1].**ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು**

ಕಾಮರಸರು ಅವರ ಆಳ್ವಿಕೆಗೆ ಒಳಪಟ್ಟಿದ್ದ ಬೆಳಗೆರೆಯ ಪಶ್ಚಿಮದಲ್ಲಿ ಗದ್ದೆಯನ್ನು ಶ್ರೀಯೋಗೇಶ್ವರ ದೇವರ ನೈವೇದ್ಯಕ್ಕೆ ದಾನ ನೀಡಿದ ಬಗ್ಗೆ ಮಾಹಿತಿ ನೀಡುತ್ತದೆ. ಮತ್ತೊಂದು ಕುಗಾ ಬೆಳಕೆರೆಯ ಶಾಸನವು[2] ಬರವಣಿಗೆ ಸ್ವಲ್ಪ ಹಾಳಾಗಿದೆ. ಆದರೂ "ಬೆಳ್ಕರೆ"ಯ ನಾಯಕನು ಭದ್ರೇಶ್ವರ ದೇವರಿಗೆ ದತ್ತಿ ಬಿಟ್ಟಿರುವ ಬಗ್ಗೆ ತಿಳಿಸುತ್ತದೆ. ಹಾಳೂರು ಗ್ರಾಮದಲ್ಲಿರುವ ಕಲ್ಲೇಶ್ವರ ದೇವಾಲಯದ ಹತ್ತಿರವಿರುವ ಒಂದು ಶಾಸನವು[3] ಧನ್ವಂತರಿ ವಿಜಯ ಪಂಡಿತರು ಶರ್ರೀಕಲಿದೇವರ ನೈವೇದ್ಯ, ನಂದಾದೀವಿಗೆಗೆ, ಸೇವಾರಾಸಿ ಗುರುಗಳಿಗೆ ಅವರೇ ಕಟ್ಟಿಸಿದ ವಿಜಯ ಸಮುದ್ರದ ಮರ್ಧಯದ ಮೊದಲ ಏರಿ ಕೆಳಗಿನ ಗದ್ದೆ ಚೆಂಬೆಯಗರೆ ಅಥವಾ ಜಿಯಗೆರೆಯ ತೆಂಕಣ ಕೋಡಿಯ ಮೂಡಲ ತೆಂಕಣ ಭೂಮಿಯನ್ನು ದಾನ ನೀಡಿದ ಬಗ್ಗೆ ವಿವರಣೆ ಇದೆ.

ಈ ಶಾಸನಗಳಲ್ಲಿರುವ ಆಧಾರದಿಂದ ಈ ಗ್ರಾಮದ ಮೂಲ ಹೆಸರು "ಬೆಳಗೆರೆ" ಆಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಮೇಲಿನ ಹಾಳವಾಳಿನ ಮೂರನೇ ಶಾಸನವನ್ನು ಅವಲೋಕಿಸಿ ನೋಡಿದಾಗ "ಬೆಳಕೆರೆ" ಎನ್ನುವ ಹೆಸರಿಗಿಂತ ಪೂರ್ವದಲ್ಲಿ "ಚೆಂಬೆಯಗೆರೆ" ಅಥವಾ "ಬೆಯಗೆರೆ" ಎಂದಾಗಿತ್ತು ಎನ್ನುವುದು ತಿಳಿಯುತ್ತದೆ. ಆದರೆ ಈಗ ವಾಸ ಮಾಡುತ್ತಿರುವ ದೇವರ ಬೆಳಗೆರೆಯ ನಿವಾಸಿಗಳು ಹೇಳುವಂತೆ ಮೊದಲು ಅವರು ಹಾಳುವಾಳು (ಹಳ್ಯಾಳು) ಗ್ರಾಮದ ವಾಸಿಗಳಾಗಿದ್ದರು. ನಂತರದಲ್ಲಿ ವಿಜಯ ಸಮುದ್ರ (ಈಗಿನ ಬೆಳಕೆರೆ ಡ್ಯಾಮ್) ಕಟ್ಟಿಸಿದ ತರುವಾಯ ಚಂಬಗೆರೆ ಎಂದು ಕರೆಯಲಾಗುತ್ತಿದ್ದ ಸ್ಥಳಕ್ಕೆ ಸ್ಥಳಾಂತರಗೊಂಡಿರಬೇಕೆಂದು ತೋರುತ್ತದೆ. ಈ ಶಾಸನಗಳಲ್ಲಿನ ಇನ್ನೊಂದು ಅಂಶವಾದ "ಕಲಿದೇವರ ದೇವಾಲಯದ ಪೌಳಿಯ ಪಡುವಲಿನ (ಪಶ್ಚಿಮ) ಬಡಗಲ (ಉತ್ತರ)ದಲ್ಲಿನ 20 ಮನೆಯ ನಿವೇಶನ ಪುರದ ಸೀಮೆಯನ್ನು" ದಾನ ನೀಡಿರುವುದನ್ನು ಗಮನಿಸಿದರೆ ಇಂದಿನ ಕುಣಿಬೆಳಕೆರೆ ಗ್ರಾಮ ಸ್ಥಳ ಎಂದು ಗೊತ್ತಾಗುತ್ತದೆ. ಇದರಿಂದಾಗಿ ಹಾಳುವಾಳು ಗ್ರಾಮದ ನಿವಾಸಿಗಳು ಕೆರೆಯನ್ನು ಕಟ್ಟಿಸಿದ ಮೇಲೆ ಗ್ರಾಮವು ಬೆಳಕರೆಯಾಗಿಯೂ, ಪೌಳಿಯ ಉತ್ತರದಲ್ಲಿನ ಗ್ರಾಮವು ಚಿಕ್ಕಬೆಳಕೆರೆ ಆಗಿಯೂ ಅಸ್ತಿತ್ವಗೊಂಡಿರುವುದೆಂದು ತೋರುತ್ತದೆ. ಇದಕ್ಕೆ ಸಾಕ್ಷಿಯಾಗಿ ಇದೇ ಹಾಳುವಾಳು ಸ್ಥಳದಲ್ಲಿರುವ ವೀರಗಲ್ಲು ಶಾಸನವು[4] "ಚಿಕ್ಕಬೆಳಕರಿಯ" ತುರುಗಳನ್ನು ಕಾಪಾಡಿ ಶಿವಲೋಕ ಸೇರಿದ ಕುರುಬರ ಚಂದ್ರಗೌಡನಿಗೆ ಮೊಮ್ಮಗೌಡ, ಸೋಮಗೌಡ, ಮರಿಗೌಡರು" ಭೂಮಿಯನ್ನು ದಾನ ನೀಡಿರುವ ಬಗ್ಗೆ ಮಾಹಿತಿ ಒದಗಿಸುತ್ತದೆ. ಈ "ಚಿಕ್ಕಬೆಳಕರಿ"ಯು ಈಗಿನ ದೇವರ ಬೆಳಕೆರೆಯೇ" ಅಥವಾ "ಕುಣಿ ಬೆಳಕೆರೆಯ" ಎನ್ನುವುದು ಸ್ಪಷ್ಟವಾಗುವುದಿಲ್ಲ. ಒಟ್ಟಿನಲ್ಲಿ ಹಾಳುವಾಳು ಗ್ರಾಮವು ಬೆಳಕೆರೆ ಮತ್ತು ಕುಣಿಬೆಳಕೆರೆಗಳಾಗಿರುವುದು ಎಂದು ತಿಳಿಯಬಹುದಾಗಿದೆ.

ಈ ಭಾಗದ ಜನರ ಮನದಲ್ಲಿ ಈ ದೇವರ ಬೆಳಕೆರೆ ಗ್ರಾಮವು ಬೆಳಕೆರೆ ಎಂದೇ ಪ್ರಚಲಿತದಲ್ಲಿರುವುದನ್ನು ಕಾಣಬಹುದಾಗಿದೆ. ಇದರ ಮೊದಲ ಹೆಸರು ಬೆಳಕೆರೆ ಎನ್ನುವುದು

ಸ್ಪಷ್ಟವಾಗುತ್ತದೆ. ಈ ಚಂಬೆಯಗೆರೆಯ ಸ್ಥಳದಲ್ಲಿನ ಗ್ರಾಮವು ಬೆಳಕೆರೆ ಹೆಸರಿನಲ್ಲಿ ಪ್ರಚಲಿತವಾಗಿದ್ದ ಸಂದರ್ಭದಲ್ಲಿ ಈ ಪ್ರದೇಶವನ್ನು ಹರಿಗರ ದೇವರ ಭೂಮಿ ಅಥವಾ ದೇವ ಭೂಮಿ ಎಂದು ಪರಿಗಣಿಸಿದಂತೆ ಕಾಣುತ್ತದೆ. ಇದ್ದಕೆ ಹರಿಹರದಲ್ಲಿರುವ ಶಾಸನ[5]ದಲ್ಲಿ ತಿಳಿಸಿರುವಂತೆ "ಹರಿಹರದಲ್ಲಿನ ಮಹಾಜನರು ಹರಿದ್ರಾ ನದಿಗೆ ಕ್ರಿ.ಶ.1410ರಲ್ಲಿ ಸೇತುವೆಯನ್ನು (ಕಟ್ಟಿ) ಕಟ್ಟಿಸಿ ದೇವರ ಭೂಮಿಯೊಳಗಿನ ಬನ್ನಿಕೋಡಿನಿಂದ ಗಂಗನರಸಿಯವರೆಗೆ ಕಾಲುವೆಯನ್ನು ತೆಗೆಸಿದ ಉಲ್ಲೇಖವಿದೆ. ಇದರಲ್ಲಿನ ಹರಿದ್ರಾ ನದಿಗೆ ಸೇತುವೆ ಕಟ್ಟಿದ್ದು ಎಂದರೆ ಈಗಿನ ದೇವರ ಬೆಳಕೆರೆ ಡ್ಯಾಂ ಎನ್ನುವುದು ನಿರ್ವಿವಾದವಾದುದಾಗಿದೆ. ಮೊದಲು ಈ ಸ್ಥಳದಲ್ಲಿನ ಶಾಗಲೆಹಳ್ಳಿ ಮತ್ತು ಸೂಳೆಕೆರೆ ಹಳ್ಳೀ (ಹರಿದ್ರಾ ನದಿ)ಗಳು ಸಂಗಮವಾದ ಈ ಸ್ಥಳದಲ್ಲಿ ಚಿಕ್ಕಕೆರೆ ಕಟ್ಟಲಾಗಿತ್ತು. 1980ರ ದಶಕದಲ್ಲಿ ಭದ್ರಾ ಅಚ್ಚುಕಟ್ಟು ಕಾರ್ಯಾರಂಭಗೊಂಡು ನಂತರ ಇಲ್ಲಿನ ದೊಡ್ಡ ಪ್ರಮಾಣದ ಅಣೆಕಟ್ಟು ಕಟ್ಟಲಾಗಿ ಸು.6000 ಎಕರೆ ಪ್ರದೇಶದಲ್ಲಿ ನೀರು ಸಂಗ್ರಹವಾಗುತ್ತಿತ್ತು. ಸು.ಅಂಇನ ವಿಜಯ ಸಮದ್ರವು ಹರಿದ್ರಾ ಸೇತುವೆಯಾಗಿ ಇಂದು ದೇವರ ಬೆಳಕೆರೆ ಪಿಕಪ್ ಡ್ಯಾಂ ಆಗಿರುವಂತೆ ದೇವರ ಭೂಮಿಯಾದ ಈ ಪ್ರದೇಶದಲ್ಲಿನ ಬೆಳಕೆರೆ ಗ್ರಾಮವು ನಂತರದಲ್ಲಿ ದೇವ ಬೆಳಕೆರೆ ಆಗಿದೆ ಎಂದು ಹೇಳಬಹುದು.

ಇದೇ ಗ್ರಾಮಕ್ಕೆ ಸಂಬಂಧಿಸಿದಂತೆ ಒಂದು ದಂತಕಥೆ ಇದ್ದು ಅದರಲ್ಲಿ ಎರಡು ಹಳ್ಳಿಗಳ ಈ ಪ್ರದೇಶ ಫಲವತ್ತಾಗಿಯೂ ಪವಿತ್ರ ಸ್ಥಳವು ಆಗಿದ್ದು ಗಿಡಮರಗಳಿಂದ ತುಂಬಿ ತುಳುಕುತ್ತಿತ್ತು. ಮತ್ತು ಇಲ್ಲಿ ಹುಲುಸಾಗಿ ಹಲ್ಲು ಬೆಳೆಯುತ್ತಿತ್ತು. ಹೀಗಾಗಿ ಸುತ್ತಮುತ್ತಲಿನ ದನಗಾಯಿಗಳು ಹಸುಗಳನ್ನು ಮೇಯಿಸಲು ಇಲ್ಲಿಗೆ ಬರುತ್ತಿದ್ದರು. ಅದರಲ್ಲಿ ಗುಳ್ಳದಳ್ಳಿಯ ಪಟೇಲರ ಹಸುವು ಕೆರೆಯ ಸಮೀಪದಲ್ಲಿದ್ದ ಪೆಳೆಯಲ್ಲಿನ ಹುತ್ತಕ್ಕೆ ಪ್ರತಿದಿನವೂ ಹಾಲು ಸುರಿಸಿ ಬರುತ್ತಿದ್ದರಿಂದ ಅದು ಮನೆಯಲ್ಲಿ ಹಾಲು ಕೊಡುತ್ತಿರಲಿಲ್ಲವಂತೆ. ಇದರಿಂದ ಕೋಪಗೊಂಡ ಪಟೇಲರು ಆಳ್ಳಗನಿಗೆ ಬೈದು ಅದರ ಪತ್ತೆಗಾಗಿ ಹಸುಗಳು ಮುಂದೆ ಹೋದ ಮೇಲೆ ಹಿಂದಿನಿಂದ ಇತರೆ ಆಳುಗಳೊಂದಿಗೆ ಹೋಗಿ ಪರೀಕ್ಷಿಸಿದಾಗ, ಹಸುವು ಪೆಳೆಯೊಳಗೆ ಹೋಗಿ ಸ್ವಲ್ಪ ಹೊತ್ತಿನಲ್ಲಿ ವಾಪಾಸು ಬಂದದ್ದನ್ನು ನೋಡಿ ಆಳುಗಳಿಂದ ಪೆಳೆಯನ್ನು ಬಯಲು ಮಾಡಿ ಪರಾಮರ್ಶಿಸಿದಾಗ ಹಸುವು ಹುತ್ತಕ್ಕೆ ಹಾಲು ಸುರಿಸಿರುವುದು ಗೋಚರಿಸುತ್ತದೆ. ಇದನ್ನು ಕಂಡು ಆಶ್ಚರ್ಯಗೊಂಡು ಪಟೇಲು ಆ ಪೆಳೆಯನ್ನೆಲ್ಲ ತೆಗೆಸಿ ಹುತ್ತವನ್ನು ಪರೀಕ್ಷಿಸಲಾಗಿ, ಅದರಲ್ಲಿ ಸುಂದರವಾದ ಉದ್ಭವ ಲಿಂಗ ಇರುವುದನ್ನು ಕಾಣುತ್ತಾರೆ. ಅದನ್ನು ತಿಳಿದ ಸುತ್ತಮುತ್ತಲಿನ ಗ್ರಾಮಸ್ಥರು ಮತ್ತು ಬೆಳಕೆರೆಯ ಗ್ರಾಮಸ್ಥರು ಸೇರಿ ಚಿಕ್ಕಗುಡಿ ಕಟ್ಟುವ ಬಗ್ಗೆ ಸಮಾಲೋಚನೆ ಮಾಡುತ್ತಿರುವಾಗ ಒಬ್ಬ ಬಾಲಕನ ಮೈಮೇಲೆ ದೇವರು ಬಂದು "ನಾವು ಮೈಲಾರಲಿಂಗ ಮತ್ತು ಗಂಗೆಮಾಳವ್ವ. ನಾವು ಇಲ್ಲಿಯೇ ನೆಲೆಸುತ್ತೇವೆ" ಎಂದು ಹೇಳಿತಂತೆ. ಆದ್ದರಿಂದ ಆ ಜಾಗದಲ್ಲಿ ಚಿಕ್ಕದೊಂದು ಗುಡಿ ಕಟ್ಟಿ ಸುತ್ತಮುತ್ತಲಿನ ಗ್ರಾಮದವರು ಪೂಜಿಸತೊಡಗುತ್ತಾರೆ. ದೇವರು ಒಡಮೂಡಿದ ಆ ಸ್ಥಳವು ದೇವರ ಭೂಮಿ ಆಗಿಯೂ

ನಂತರದಲ್ಲಿ ಆ ಸ್ಥಳಕ್ಕೆ ಬೆಳಕೆರೆಯ ಕೆಲವು ಕುಟುಂಬಗಳು ಈಗ್ಗೆ ನಾಲ್ಕು ತಲೆಮಾರುಗಳ ಹಿಂದೆ ಬಂದು ನೆಲೆಸಿದ್ದರಿಂದಾಗಿ ದೇವರ ಬೆಳಕೆರೆ ಎಂದು ಹೆಸರು ಬಂದಿರುವುದಾಗಿ ಹೇಳುತ್ತಾರೆ.

ಜನಪದರ ಮತ್ತೊಂದು ಐತಿಹ್ಯದಂತೆ ಒಂದು ಪರಿವಾರವು ಅಲೆಯುತ್ತಾ ಮೈಲಾರದಲ್ಲಿ ಕೆಲಕಾಲ ಇದ್ದು, ನಂತರ ರಾಣಿಬೆನ್ನೂರು, ಹರಪ್ಪನಹಳ್ಳಿ, ಕೊಂಡಜ್ಜಿ ಭಾಗಗಳಲ್ಲಿ ಅವರ ಮನೆದೇವರು ಮೈಲಾರ ಲಿಂಗನನ್ನು ಸ್ಥಾಪಿಸಿಕೊಂಡು ವಾಸಿಸತೊಡಗಿದ್ದರಿಂದ ಗ್ರಾಮವನ್ನು ದೇವರ ಬೆಳಕೆರೆ ಎಂದು ಕರೆದುಕೊಂಡಿದುದಾಗಿ ಹೇಳಲಾಗುತ್ತದೆ. ಮೈಲಾರ ಲಿಂಗದೇವ ಇವರ ಗುಡ್ಡ ದೇವರಗುಡ್ಡ ಎಂದು ಕರೆಯುವಂತೆ, ಈ ಸ್ಥಳವನ್ನು ದೇವರ ಭೂಮಿ ಎಂದು ಕರೆದಿರಬೇಕು. ಕಾಲಾನಂತರದಲ್ಲಿ ಬೆಳಕೆರೆಯ ಕೆಲವು ಜನರು ಹಾಗೂ ಕೆಂಚನಹಳ್ಳಿಯ ಜನ ಈಗಿನ ಸ್ಥಳಕ್ಕೆ ಬಂದು ನೆಲೆಸಿರುವುದಾಗಿ ತಿಳಿದು ಬರುತ್ತದೆ. ಬೆಳಕೆರೆಯ ಹಲವು ಕುಟುಂಬಗಳು ಹಳ್ಳದ ಇನ್ನೊಂದು ದಡದಲ್ಲಿ ನೆಲೆಸಿ ಬಹಳ ದಿನಗಳವರೆಗೆ ಬೆಳಕೆರೆ (ಬಹುಶಃ ಚಿಕ್ಕಬೆಳಕೆರೆ) ಕಂಡುಕೊಳ್ಳುತ್ತಿದ್ದ ಅವರು ನಂತರದ ಕಾಲದಲ್ಲಿ ಕುಣಿ ಬೆಳಕೆರೆ ಎಂದು ಬದಲಾಯಿಸಿಕೊಂಡಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ತಿಳಿದುಬರುವುದೇನೆಂದರೆ ಮೂಲದಲ್ಲಿ ಇದ್ದ "ಹಲೆವಾಳ" ಗ್ರಾಮದ ಸನಿಹದಲ್ಲಿ ನೀರಾವರಿಗಾಗಿ (ಬೆಳೆ ಬೆಳೆಯಲು) ಕೆರೆ ಕಟ್ಟದ್ದರಿಂದ ಆ ಹೆಸರು ಬದಲುಗೊಂಡು ಬೆಳೆಯುವ ಕೆರೆ ಬೆಳಕೆರೆ ಆಗಿದೆ. ನಂತರದಲ್ಲಿ ಆ ಗ್ರಾಮವು ಎರಡು ಗ್ರಾಮಗಳಾಗಿ ನಂತರ ದೇವರ ಭೂಮಿಯಲ್ಲಿನ ಗ್ರಾಮವು ದೇವರ ಬೆಳಕೆರೆ ಆಗಿಯೂ ಕೂನಿಗೊಳಗಾದ ಅಥವಾ ತಗ್ಗಾದ (ಅಥವಾಕುಣಿ–ತಗ್ಗು ಸ್ಥಳದಲ್ಲಿನ) ಗ್ರಾಮವು ಕೂನಿ (ಕುಣಿ) ಬೆಳಕೆರೆ ಆಗಿರುವಂತೆ ತೋರುತ್ತದೆ.

ಇಲ್ಲಿನ ಜನರ ನಂಬಿಕೆಯಂತೆ ಭರ್ಮಪ್ಪರ ಹುಚ್ಚಪ್ಪ ತಂದೆ ನಿಂಗಪ್ಪ ವಂಶಸ್ಥರು ಈ ಗ್ರಾಮದ ಹುಗ್ಗಿ ಹೊಯ್ದವರೆಂದೂ, ಈಗಲೂ ಆ ವಂಶಸ್ಥರ ಮನೆಯಿಂದ ಎಡೆ ಬರುವವರೆಗೆ ಈ ದೇವರ ರಥವು ಸಾಗುವುದಿಲ್ಲವೆನ್ನುವ ಪ್ರತೀತಿ ಇದೆಯಲ್ಲದೇ ಈ ಊರಿನ ಎಲ್ಲಾ ಕಾರ್ಯಗಳಲ್ಲಿ ಅವರ ಉಪಸ್ಥಿತಿ ಇರಬೇಕೆಂದು ಹೇಳಲಾಗುತ್ತದೆ. ಈ ಗ್ರಾಮದಲ್ಲಿ ಮೈಲಾರಲಿಂಗೇಶ್ವರ ಕಲ್ಲೇಶ್ವರ, ಬಸವೇಶ್ವರ, ಮಹೇಶ್ವರ, ಚೌಡಾಂಬಿಕೆ, ದುರ್ಗಾಂಬಿಕೆ, ಕರಿಯಮ್ಮ ಚಂದ್ರಲಿಂಗೇಶ್ವರಿ ದೇವಾಲಯಗಳಿವೆ.

ಈಗ ಇರುವ ಭವ್ಯ ಕಟ್ಟಡದ ದೇಗುಲವನ್ನು ಶಾಲಿವಾಹನ ಶಕ 876ನೇ ಜಯಸಂವತ್ಸರ ತಾರೀಖು 04–04–1954ರಲ್ಲಿ ಕಟ್ಟಲಾಗಿದೆಯೆಂದು ತಿಳಿಸುತ್ತದೆ. ಪೂರ್ವಾಭಿಮುಖವಾಗಿ ನಿರ್ಮಿಸಲಾಗಿರುವ ಈ ದೇವಾಲಯದ ಮೂಲ ಭಾಗದಲ್ಲಿರುವ ಮಹಾದ್ವಾರವು ಭವ್ಯವಾಗಿದ್ದು ಹಂಪೆಯ ವಿರೂಪಾಕ್ಷ ದೇಗುಲದ ಮಹಾದ್ವಾರವನ್ನು ನೆನಪಿಗೆ ತರುತ್ತದೆ. ಮಹಾದ್ವಾರದ ತರುವಾಯ ಸುಮಾರು ನಾಲ್ಕು ಅಡಿಗಳ ಕೆಳಗೆ ಮೂರು ಭಾಗಗಳಿರುವ ದೇವಾಲಯ ಕಾಣಬರುತ್ತದೆ. ಹಿಂದಿನ ಭಾಗವು ಗರ್ಭಗೃಹವಾಗಿದೆ. ಇದರ ಒಳಗೆ ಮಧ್ಯದಲ್ಲಿ ಮೈಲಾರಲಿಂಗೇಶ್ವರ ಲಿಂಗವನ್ನು ಮತ್ತು ಗಂಗಮಾಳದ್ಯ

ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮುಂದಿರುವ ಚೌಕಾಕಾರದ ಕೊಠಡಿಯಲ್ಲಿ ಸುಖನಾಸಿ ಎಂದು ಕರೆಯುವರು. ಇದರಲ್ಲಿ ಪೂಜಾ ಸಾಮಗ್ರಿಗಳನ್ನು ಇಡಲಾಗಿದೆ. ಮೂರನೆಯದು ಅಂದರೆ ಸುಖನಾಸಿಯ ಮುಂದಿರುವ ವಿಶಾಲವಾಗಿರುವ ರಂಗಮಂಟಪ. ಇದರಲ್ಲಿ ಬಂದ ಭಕ್ತಾದಿಗಳು ಇದರಿಂದಲೇ ದೇವರ ದರ್ಶನ ಮಾಡುತ್ತಾರೆ. ಇದನ್ನು ಇಟ್ಟಿಗೆ ಮತ್ತು ಸಿಮೆಂಟನ್ನು ಉಪಯೋಗಿಸಿ ಕಟ್ಟಲಾಗಿದೆ. ಈ ದೇವಾಲಯದ ಎಡಬಾಗದ ಹಿಂಬದಿಯಲ್ಲಿ ಒಂದು ಬೇವಿನ ಮರಕ್ಕೆ ಕಟ್ಟೆಯನ್ನು ಕಟ್ಟಲಾಗಿದೆ. ಇದರ ಮೇಲೆ ಭಿನ್ನವಾಗಿರುವ ಹಳೆಯ ಶಿವಲಿಂಗ, ನಾಗರಕಲ್ಲುಗಳು, ಇದರ ಬಲಭಾಗದಲ್ಲಿ ಒಂದು ಆಂಜನೇಯನ ಚಿಕ್ಕ ಗುಡಿ ಇದೆ, ಮತ್ತೆ ಕೆಲವು ಮೂರ್ತಿಶಿಲ್ಪಗಳಿವೆ.

ಇಲ್ಲಿ ಪ್ರತಿ ಹುಣ್ಣಿಮೆ, ಭಾನುವಾರ ವಿಶೇಷ ಪೂಜೆ ನಡೆಯುತ್ತಿದ್ದು ಎಲ್ಲಾ ಹಬ್ಬ ಹರಿದಿನಗಳಲ್ಲಿ ಊರಿನ ಎಲ್ಲಾ ಕೇರಿಗಳಲ್ಲಿ ಸ್ವಾಮಿಯ ಉತ್ಸವವನ್ನು ಮಾಡುತ್ತಾರೆ. ಬನದ ಹುಣ್ಣಿಮೆಯನ್ನು ಭಂಡಾರ ಹುಣ್ಣಿಮೆ ಎಂದೇ ಕರೆಯಲಾಗುತ್ತಿದ್ದು ಅಂದು ಅರಿಶಿಣವನ್ನು ಕುಟ್ಟಿ ಪುಡಿ ಮಾಡಿ, ಭಂಡಾರ ಮಾಡಿ ಸ್ವಾಮಿಯನ್ನು ಮದುಮಗನನ್ನಾಗಿ ಮಾಡಿ ಪ್ರಸಾದ ವಿತರಣೆ ಮಾಡಲಾಗುವುದು. ಮೂರನೇ ದಿನ ಭಂಡಾರದ ಚಿಕ್ಕ ಗಂಟನ್ನು ಕಟ್ಟಿ ಬರುವ ಭಕ್ತಾದಿಗಳಿಗೆ ನೀಡಲಾಗುತ್ತದೆ. ಭಾರತ ಹುಣ್ಣಿಮೆ ಆಗಿ ಐದನೇ ದಿನದಲ್ಲಿ ಮೈಲಾರ ಲಿಂಗಪ್ಪ ಮತ್ತು ಗಂಗೆ ಮಾಳ್ವರ ಮದುವೆಯನ್ನು ಪದ್ಧತಿ ಪ್ರಕಾರವೇ ಮಾಡಿ ನವ ದಂಪತಿಗಳ ಮೆರವಣಿಗೆಯೋಪಾದಿಯಲ್ಲಿ ಇಬ್ಬರೂ ಏರಿದ ರಥದ ಉತ್ಸವ ಜರುಗುವುದು. ಈ ರಥೋತ್ಸವ ದಿನದಂದೇ ಗುಳ್ಳದಳ್ಳಿ ದುರುಗಮ್ಮ, ಕಡ್ಲೆಗುಂದಿ ದರುಗಮ್ಮ, ಇದೇ ಗ್ರಾಮದ ಹಳ್ಳದ ದುರುಗಮ್ಮ ದೇವತೆಗಳನ್ನು ಸ್ವಾಮಿ ಸನ್ನಿಧಿಗೆ ಬರಮಾಡಿಕೊಳ್ಳಲಾಗುತ್ತದೆ. ರಥೋತ್ಸವದ ಮಾರನೇ ದಿನ ಸರಪಳಿ ಪವಾಡ, ಕಾಲು ಪವಾಡ, ಕೈಪವಾಡ, ನಂತರ ಓಕುಳಿ, ಅದಾದ ಮಾರನೇ ದಿನ ಗೋರಪ್ಪರಿಂದ ಮಣಿ ಮಾಡುವುದು ಇನ್ನು ಮೊದಲಾದ ಆಚರಣೆಗಳು ಜರುಗುತ್ತವೆ. ಈ ಎಲ್ಲಾ ಆಚರಣೆಗಳು ಮುಗಿದ ಮೇಲೆ ದೇವತೆಗಳನ್ನು ಊರಿನಲ್ಲಿ ಮೆರವಣಿಗೆ ಮಾಡಿ ಉಡಿಯಕ್ಕಿ ತುಂಬಿ ರಾತ್ರಿ ವೇಳೆಗೆ ಅವುಗಳಿರುವ ಸ್ಥಳಕ್ಕೆ ಕಳುಹಿಸಿಕೊಡುತ್ತಾರೆ. ನಂತರ ರಥದ ಕಳಸವನ್ನು ಇಳಿಸಲಾಗುವುದು. ತರುವಾಯ ದಸರಾದಲ್ಲಿ ಒಂಬತ್ತು ದಿನಗಳವರೆಗೆ ಸ್ವಾಮಿಯನ್ನು ನೋಡಲು ಆನೆಯ ಮೇಲೆ ಕೂರಿಸಿ, ಹತ್ತನೇ ದಿನ ಬನ್ನಿಮಂಟಪಕ್ಕೆ ಕರೆದೊಯ್ದು ಅಲ್ಲಿರುವ ಕುರುವತ್ತೆವ್ವನ ಗುಡಿಯಲ್ಲಿ ಕೂರಿಸಿ ಅಂಬು ಹೊಡೆದು (ಬಾಣ ಯಾವ ಕಡೆ ಬೀಳುತ್ತದೋ ಆ ಕಡೆ ಮಳೆ ಬೆಳೆ ಚೆನ್ನಾಗಿ ಆಗುವುದೆಂಬ ನಂಬಿಕೆ) ಬನ್ನಿ ಮುರಿದು ಮೆರವಣಿಗೆಯಲ್ಲಿ ಕರೆತರಲಾಗುವುದು. ಹನ್ನೊಂದನೇ ದಿನ ಬೆಳಿಗ್ಗೆ ಮರಿಬನ್ನಿ ಮುಗಿಸಿ ಸ್ವಾಮಿಯನ್ನು ಗುಡಿದುಂಬಲಾಗುವುದು.

ಪ್ರತಿ ನಾಗರಪಂಚಮಿಯಂದು ಸ್ವಾಮಿಯ ಕಾರ್ಣಿಕ ನಡೆಯುತ್ತಿದ್ದು ಅದು ಇಲ್ಲಿನ ಮಡಿವಾಳ ಭಕ್ತರಿಂದ ಜರುಗುವುದು ಈ ದೇಗುಲದಲ್ಲಿ ದೇವಸ್ಥಾನದ ಹೊರಗಿದ್ದು ಭಕ್ತರನ್ನು ಗೊರಪ್ಪ, ಗೊರಮ್ಮ

ದೀಕ್ಷೆ ನೀಡುವುದು, ದೋಣಿ ತುಂಬಿಸುವುದು, ಬಾಯಿ ಬೀಗ ಹಾಕುವುದು ಮತ್ತು ತೆಗೆಯುವುದು, ಸರಪಳಿ ಪವಾಡ ಮುಂತಾದ ಕಾರ್ಯಗಳು ನಡೆಯುತ್ತವೆ. ಇಲ್ಲಿನ ದೇವತಾ ಕಾರ್ಯಗಳನ್ನು ಮಾಡುವ ಪೂಜಾರಿಗಳಿಗೆ ದೇವಸ್ಥಾನದ ಭೂಮಿಯನ್ನು ನೀಡಲಾಗಿದೆ. ಅದರಿಂದ ಫಸಲನ್ನು ಬೆಳೆದುಕೊಂಡು ದೇವರ ಸೇವೆ ಮಾಡುವುದು ಇದರ ಉದ್ದೇಶವಾಗಿದೆ.

**ಆಧಾರ ಗ್ರಂಥಗಳು:**

1. ಎ.ಕ.ಸಂ. XI, ದಾ. ಶಾಸನ–61, ಹರಿಹರ, ಶಾ.ಸಂ. 53
2. ಎ.ಕ.ಸಂ. XI, ದಾ. ಶಾಸನ–73 ಹರಿಹರ, ಶಾ.ಸಂ. 02
3. ಎ.ಕ.ಸಂ. XI, ದಾ. ಶಾಸನ–74, ಹರಿಹರ, ಶಾ.ಸಂ. 22
4. ಎ.ಕ.ಸಂ. XI, ದಾ. ಶಾಸನ–75, ಹರಿಹರ, ಶಾ.ಸಂ. 21
5. ಎ.ಕ.ಸಂ. XI, ದಾ. ಶಾಸನ–23, ಹರಿಹರ, ಶಾ.ಸಂ. 83
6. ಹರಿಹರದೆಳೆಗಳು, ಡಾ.ನಾ.ಕೊಟ್ರೇಶ್ ಉತ್ತಂಗಿ, 2013, ಪು.ಸಂ.113–114.